ಈ) ಹುಡ್ಕೋ ಸಂಸ್ಥೆಯಿಂದ ಅನುದಾನ ಬಿಡುಗಡೆಯಾದ ಕೂಡಲೇ ಸದರಿ ಕಾಲೇಜಿನ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಹುಣಸೂರು ತಾಲ್ಲೂಕಿನ ತಾಲ್ಲೂಕು ಪಂಚಾಯಿತಿಯಲ್ಲಿ ತ್ರೈಮಾಸಿಕ (ಕೆ.ಟಿ.ಪಿ) ಪರಿಶೀಲನೆ ಸಭೆ

2584 (3360) ಶ್ರೀ ವಿ. ಪಾಪಣ್ಣ (ಹುಣಸೂರು) :— ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ತಾಲ್ಲೂಕು ಪಂಚಾಯಿತಿಯ ತ್ರೈಮಾಸಿಕ ಪರಿಶೀಲನಾ ಸಭೆ (ಕೆ.ಟಿ.ಪಿ)ಗೆ ಕೆಲವು ತಾಲ್ಲೂಕಿನ ಅಧಿಕಾರಿಗಳು ಗೈರುಹಾಜರಾಗಿ ಮಾಹಿತಿಯನ್ನು ನೀಡದೇ ಇರುವುದು ಸರ್ಕಾರಕ್ಕೆ ತಿಳಿದಿದೆಯೆ;

ಆ) ಹಾಗಿದ್ದಲ್ಲಿ, ಗೈರುಹಾಜರಾದವರ ಮೇಲೆ ಸರ್ಕಾರವು ಯಾವ ರೀತಿನ ಕ್ರಮವನ್ನು ಕೈಗೊಂಡಿದೆ.

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು) :—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮುಂಡರಗಿ ಜಿಲ್ಲಾ ಪಂಚಾಯತ್ ಉಪ ವಿಭಾಗದಲ್ಲಿ ಹಣ ದುರುಪಯೋಗ

2585(2920) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದಗ ಜಿಲ್ಲೆ ಮುಂಡರಗಿ ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ಉಪ ವಿಭಾಗದಲ್ಲಿ ಕಾಮಗಾರಿಗಳಲ್ಲಿ ಹಣದ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ದುರುಪಯೋಗವಾದ ಬಗ್ಗೆ ವಿವರ ನೀಡುವುದು;

ಇ) ದುರುಪಯೋಗಪಡಿಸಿಕೊಂಡ ಅಧಿಕಾರಿಗಳ ವಿವರ ನೀಡುವುದು ಮತ್ತು ಅವರ ಮೇರೆ ಕೈಗೊಳ್ಳಲಾದ ಕ್ರಮಗಳೇನು;

ಈ) ಸದರಿ ವಿಭಾಗದಲ್ಲಿ ಮಾಡಿದ ಕಾಮಗಾರಿಗಳ ಪರಿಶೀಲನೆ ನಡೆಸಿ ದುರುಪಯೋಗ ಮಾಡಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದೆ;

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) ಬಂದಿದೆ.

ಆ) ೧. ಸಿಂಗಟಾಲೂರದ ಒಂದು ಶಾಲಾ ಕೊಠಡಿ ನಿರ್ಮಾಣದ ಕಾಮಗಾರಿಯಲ್ಲಿ ಆಗಿರುವ ಅವ್ಯವಹಾರದ ಮೊತ್ತ ೬೯,೦೦೦೦

೨. ಗುಮ್ಮಗೋಳ ಗೋಣಿ ಬಸವೇಶ್ವರ ಕಲ್ಯಾಣ ಮಂಟಪಕ್ಕೆ ಸ್ಟೀಲ್ ಹಾಗೂ ಸಿಮೆಂಟ್‌ನ್ನು ಪೂರೈಸಿದ ಮೊತ್ತ ೩೦,೦೦೦.೦೦

೩. ಎಂ.ಎಎಸ್. ಲೆಕ್ಕಪತ್ರಗಳಲ್ಲಿ ಉಗ್ರಾಣ ಸಾಮಗ್ರಿಗಳ ಲೆಕ್ಕವನ್ನು ಕಡಿಮೆ ಕೊಟ್ಟು ದುರುಪಯೋಗಪಡಿಸಿಕೊಂಡಿರುವ ಮೊತ್ತ ೧೬,೮೪,೫೭೧.೦೦

೪. ಟಿ. ಅಂಡ್ ಪಿ. ಸಾಮಗ್ರಿಗಳನ್ನು ಸಲ್ಲಿಸದೇ ಇರುವುದರಿಂದ ಆಗಿರುವ ನಷ್ಟ ೪೪,೦೫೭.೦೦

೫. ಖಾಲಿ ಸಿಮೆಂಟ್ ಚೀಲ ಹಾಗೂ ಖಾಲಿ ಡಾಂಬರ್ ಬ್ಯಾರಲ್ ಗಳನ್ನು ಉಪ ವಿಭಾಗದ ಉಗ್ರಾಣಕ್ಕೆ ಮರಳಿಸದೆ ದುರುಪಯೋಗವಾಗಿರುವ ಮೊತ್ತ ೩೭,೬೧೮.೦೦

ಒಟ್ಟು ೧೮,೬೫,೨೪೬೦೦

ಆ) ಕಿರಿಯ ಇಂಜಿನಿಯರ್‌ರಾದ ಶ್ರೀ ಜೆ.ಬಿ.ನಂದಿ ಮತ್ತು ಶ್ರೀ ಎಂ.ಕೆ. ಶೇಖ್ ಹುಸೇನ್ ಇವರು ಕಾರಣರಾಗಿರುತ್ತಾರೆ. ಅವ್ಯವಹಾರದ ಮೊತ್ತವಾದ ರೂ.೧೮,೬೫,೨೪೬೦೦ಗಳ ಪೈಕಿ ಶ್ರೀ ಜೆ.ಬಿ. ನಂದಿ ಕಿರಿಯ ಇಂಜಿನಿಯರ್ ಇವರು ೬೯,೦೦೦.೦೦ ರೂ.ಗಳ ದುರುಪಯೋಗಕ್ಕೆ ಹಾಗೂ ಶ್ರೀ ಎಂ.ಕೆ. ಶೇಖ್ ಹುಸೇನ್ ಇವರು ೧೭,೬೬,೨೪೬.೦೦ಗಳ ದುರುಪಯೋಗಕ್ಕೆ ಕಾರಣರಾಗಿರುತ್ತಾರೆ. ಹಣ ದುರುಪಯೋಗದ ಆಪಾದನೆಯ ಮೇಲೆ ಶ್ರೀ ಜೆ.ಬಿ.ನಂದಿ ಕಿರಿಯ ಇಂಜಿನಿಯರ್ ಇವರನ್ನು ಮುಹಾನಿಆ, ಜಿಪಂ. ಗದಗ್ ಆವರ ಆದೇಶ ಸಂಖ್ಯೆ : ಜಿಪಂಗ : ಸಿಬ್ಬಂದಿ: ವಿನಿ:೧೨ವಿವ:೭೭:೨೦೦೦-೨೦೦೧ ದಿನಾಂಕ: ೧೨-೨-೦೧ರಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. ತದನಂತರ ಆವರನ್ನು ಮುಹಾನಿಆ,ಜಿಪಂ, ಗದಗ್ ಇವರ ಆದೇಶ ದಿನಾಂಕ: ೩೦-೫-೨೦೦೦ರಲ್ಲಿ ಇಲಾಖಾ ವಿಚಾರಣೆ ಬಾಕಿ ಇಟ್ಟು ಆವರ ಸೇವೆಯನ್ನು ಪುನರ್‌ಸ್ಥಾಪನೆ ಮಾಡಿದ್ದಾರೆ. ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ.

ಮತ್ತೊಬ್ಬ ಆಪಾದಿತ ನೌಕರನಾದ ಶ್ರೀ ಎಂ.ಕೆ. ಶೇಖ್ ಹುಸೇನ್ ಇವರು ಸಹ ಸರ್ಕಾರಿ ಆದೇಶ ಸಂಖ್ಯೆ : ಗ್ರಾಆಪ 374 ಸೇಶಿಕಾ 2000 ದಿನಾಂಕ: 28-6-2001 ರಲ್ಲಿ ಇಲಾಖಾ ವಿಚಾರಣೆ ಬಾಕಿ ಇಟ್ಟು ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ. ಇವರ ವಿರುದ್ಧವೂ ಸಹ ಇಲಾಖಾ ವಿಚಾರಣೆಯನ್ನು ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಹೌದು.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು

2588(2934) ಪ್ರಭಾಕರ ಬಂಗೇರಾ ಕೆ. (ಬೆಳ್ತಂಗಡಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಈಗಾಗಲೇ ಸರ್ಕಾರದಿಂದ ಮಂಜೂರಾಗಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; ಅವುಗಳು ಯಾವುವು;

ಆ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಇನ್ನೂ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ; ಅವುಗಳು ಯಾವುವು;

ಇ) ಕಾರ್ಯ ನಿರತ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡಗಳನ್ನು ಹೊಂದಿವೆಯೇ; ಹೌದಾದಲ್ಲಿ ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ, ಸ್ವಂತ ಕಟ್ಟಡಗಳಿಲ್ಲದ ಕೇಂದ್ರಗಳಿಗೆ ಯಾವಾಗ ಕಟ್ಟಡಗಳ ವ್ಯವಸ್ಥೆಗೊಳಿಸಲಾಗುವುದು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) 12 ಪ್ರಾಥಮಿಕ ಆರೋಗ್ಯ ಕೇಂದ್ರಗಳು

1) ನೆರಿಯಾ 2) ಕೊಕ್ಕಡ 3) ನಾರಾವಿ 4) ಉಜಿರೆ 5) ಹತ್ಯಡ್ಕ 6) ಪೇಣೂರು 7) ಧರ್ಮಸ್ಥಳ 8) ಮುಂಡಾಜೆ 9) ಅಳದಂಗಡಿ 10) ಪದಂಗಡಿ 11) ಇಂದ್ರಬೆಟ್ಟು 12) ರಾಣಿಯೂರು

ಆ) ಪ್ರಸ್ತಾವನೆ ಇರುವುದಿಲ್ಲ

ಇ) ಸ್ವಂತ ಕಟ್ಟಡವನ್ನು ಹೊಂದಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು 10 ಉಳಿದ ಎರಡು ಕೇಂದ್ರಗಳಿಗೆ 1) ಪದಂಗಡಿ ಮತ್ತು 2) ಇಂದ್ರಬೆಟ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ

ಈ ಎರಡು ಕೇಂದ್ರಗಳಿಗೆ ನಿವೇಶನ ಲಭ್ಯವಿಲ್ಲದೇ ಇರುವುದರಿಂದ ಅವುಗಳಿಗೆ ಕಟ್ಟಡ ಕಟ್ಟಲು ಕ್ರಮ ಕೈಗೊಂಡಿರುವುದಿಲ್ಲ.